ಶ್ರೀ ಪಿ.ಜಿ.ಆರ್.ಸಿಂಧ್ಯ: ಇವತ್ತು ಸದನದ ಕೊನೆಯ ದಿವಸ. ಆದ್ದರಿಂದ ಶಾಸಕರು ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದೆರಡು ವಿಷಯವನ್ನು ಪ್ರಸ್ತಾಪ ಮಾಡಲು ಬಯಸಿದ್ದಾರೆ. ದಯಮಾಡಿ ಅವರಿಗೆ ಅವಕಾಶ ಕೊಡಿ. ಅನಂತರ ಬೇಕಾದರೆ ತಮ್ಮ ಸರ್ಕಾರಕ್ಕೆ ಏನು ಆದ್ಯತೆ ವಿಚಾರಗಳು ಇದೆಯಾ ಅದನ್ನು ಮಾಡಿಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ: ಇವತ್ತು ಕೊನೆಯ ದಿವಸ ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ 2000 ಒಪ್ಪಿಗೆಯಾಗದಿದ್ದರೆ ಲ್ಯಾಪ್ಸ್ ಆಗುತ್ತದೆ. ಸಂವಿಧಾನದ ಆಬ್ಲಿಗೇಷನ್ ಆಗುತ್ತದೆ. ಆದ್ದರಿಂದ ಮೊದಲು ಇದನ್ನು ತೆಗೆದುಕೊಳ್ಳಿ, ಇದು ಮೇಲ್ಮನೆಗೆ ಹೋಗಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅದನ್ನು ಮಾಡಿಕೊಡೋಣ. ಮೊದಲು ಶೂನ್ಯ ವೇಳೆಗೆ ಹತ್ತು ನಿಮಿಷ ಅವಕಾಶ ಕೊಡಲು ಆಗುವುದಿಲ್ಲವೆ?

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಆದ ನಂತರ ಸಾಮಾನ್ಯವಾಗಿ ಶೂನ್ಯ ವೇಳೆ ಇರುತ್ತದೆ. ತಾವುಗಳು ಸಹಕಾರ ನೀಡಿ ಹದಿನೈದು ನಿಮಿಷಗಳಲ್ಲಿ ಇದನ್ನು ಮುಗಿಸಿಕೊಡಬೇಕು. ಈಗ ಶೂನ್ಯ ವೇಳೆ.

ಶ್ರೀ ಬಿ. ಸೋಮಶೇಖರ್: ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡಿರುವ ವಿಷಯ ಅರ್ಧದಲ್ಲೇ ನಿಂತಿದೆ. ಏಕೆಂದರೆ ಮಂತ್ರಿಗಳು ಮಧ್ಯದಲ್ಲಿ ಇಂಟರ್‌ವಿನ್ ಆಗಿದ್ದಾರೆ. ನನಗೆ ಸರಿಯಾದ ಉತ್ತರವನ್ನು ಅವರು ಕೊಟ್ಟಿಲ್ಲ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಅಜೆಂಡಾದಲ್ಲಿರುವ ಕಾರ್ಯಕ್ರಮಗಳ ಪ್ರಕಾರ ಚರ್ಚೆಯನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಅವರು ಹೇಳಿದ ಹಾಗೆ ತಮ್ಮದು ಕೊನೆಯಲ್ಲಿ ಬರುತ್ತದೆ. ಆದುದರಿಂದ ಕೊನೆಯಲ್ಲಿ ಮತ್ತೆ ತೆಗೆದುಕೊಳ್ಳೋಣ. ಈಗ ಗಮನ ಸೆಳೆಯುವ ಸೂಚನೆ. ಯಾರ್ಯಾರು ಗಮನ ಸೆಳೆಯುವವರಿದ್ದಾರೆ ಅವರೆಲ್ಲರೂ ಬೇಗ ಬೇಗ ಮುಗಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಶೂನ್ಯ ವೇಳೆಯಲ್ಲಿ ಇನ್ನೂ ನಾಲ್ಕೈದು ಜನರು ಮಾತನಾಡುವವರಿದ್ದಾರೆ. ತಾವು ಅವರಿಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಆಯಿತು. ಶೂನ್ಯ ವೇಳೆಯನ್ನೇ ಮುಂದುವರಿಸೋಣ. ಇನ್ನು 20 ನಿಮಿಷ ಕಾಲಾವಕಾಶವಿದೆ. ಮಾನ್ಯ ಪಾಪಣ್ಣನವರೆ ಈಗ ನೀವು ವಿಷಯ ಪ್ರಸ್ತಾಪ ಮಾಡಿ.

## 4. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

### (ಅ) ತಂಬಾಕು ಸಾಗುವಳಿ "ಬೆಳೆ ರಜೆ" ಘೋಷಣೆ.

ಶ್ರೀ ಪಾಪಣ್ಣ (ಹುಣಸೂರು): ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿನದ ಪತ್ರಿಕೆಗಳಲ್ಲಿ ಕರ್ನಾಟಕ ರಾಜ್ಯದ ರೈತರು ಹೊಗೆ ಸೊಪ್ಪು ರಜೆ ಘೋಷಣೆ ಮಾಡುವುದಕ್ಕೆ ನನ್ನ ಬೆಂಬಲ ಇದೆಯೆಂದು ಸತ್ಯಕ್ಕೆ ದೂರವಾದ ವರದಿ ಬಂದಿದೆ. ದಯಮಾಡಿ ಸರ್ಕಾರದವರು ಸ್ಪಷ್ಟೀಕರಣ ನೀಡಬೇಕ. ರೈತರುಗಳೇ ಏನಾದರು ಸರ್ಕಾರದವರನ್ನು ಕೇಳಿಕೊಂಡು ಈ ವರ್ಷ ರಜೆಯನ್ನು ಘೋಷಣೆ ಮಾಡಿ ಎಂದು ಕೇಳಿದ್ದಾರೆಯೇ ಎಂಬ ಬಗ್ಗೆ ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹೇಳಬೇಕು.

ಅಧ್ಯಕ್ಷರು : ಇದಕ್ಕೆ ಸಂಬಂಧಪಟ್ಟ ಹಾಗೆ ಕೃಷಿ ಮಂತ್ರಿಗಳು ಒಂದು ಹೇಳಿಕೆಯನ್ನು ನೀಡುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ಆಂಧ್ರಪ್ರದೇಶವು ಸೇರಿದಂತೆ, ಕರ್ನಾಕಟದಲ್ಲಿಯೂ ಸಹ 2000-2001ನೇ ವರ್ಷಕ್ಕೆ ವಿ.ಎಫ್.ಸಿ ತಂಬಾಕು ಸಾಗವಳಿಗೆ ''ಬೆಳೆ ರಜೆ'' ಎಂದು ಘೋಷಿಸುವಂತೆ ಆಂಧ್ರ ಪ್ರದೇಶದಿಂದ ಬೇಡಿಕೆ ಇರುವುದು ಸದನಕ್ಕೆ ಈಗಾಗಲೇ ತಿಳಿದಿದೆ. ಈ ರೀತಿಯ ''ಬೆಳೆ ರಜೆ'' ಘೋಷಿಸದಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಒತ್ತಡ ತರುವಂತೆ, ಕರ್ನಾಟಕ ರಾಜ್ಯ ತಂಬಾಕು ಬೆಳೆಗಾರರ ವೇದಿಕೆ ಹುಣಸೂರು, ಇವರು ಸಲ್ಲಿಸಿದ ಮನವಿಯ ಮೇರೆಗೆ, ಕೇಂದ್ರ ವಾಣಿಜ್ಯ ಸಚಿವರು ಹಾಗೂ ಕೇಂದ್ರ ಕೃಷಿ ಸಚಿವರುಗಳ ಜೊತೆ ಈ ವಿಷಯವನ್ನು ಪ್ರಸ್ತಾಪಿಸಿರುತ್ತೇನೆ. ಮಾನ್ಯ ಮುಖ್ಯಮಂತ್ರಿಯವರೂ ಸಹ ಈ ವಿಷಯವನ್ನು ಕೇಂದ್ರ ವಾಣಿಜ್ಯ ಸಚಿವರ ಜೊತೆ ಪ್ರಸ್ತಾಪಿಸಿರುತ್ತಾರೆ. ಆದರೆ, ದಿನಾಂಕ 27-3-2000ರಂದು ಹೈದರಾಬಾದ್‌ನಲ್ಲಿ ನಡೆದ 100ನೇ (ವಿಶೇಷ) ತಂಬಾಕು ಮಂಡಳಿ ಸಭೆಯಲ್ಲಿ, ಆಂಧ್ರಪ್ರದೇಶದ ಸರ್ಕಾರದ ಪರವಾಗಿ ಭಾಗವಹಿಸಿದ್ದ ಸದಸ್ಯರು, ಹರಾಜು ವಿಭಾಗದಲ್ಲಿಯ ತಂಬಾಕು ಕೊಳ್ಳುವವರ ನೀರಸ ಪ್ರತಿಕ್ರಿಯೆ ಹಾಗೂ ಹೆಚ್ಚು ದಾಸ್ತಾನು ಸಂಗ್ರಹದಿಂದ ಸಾಮಾನ್ಯ ಹರಾಜು ಪ್ರಕ್ರಿಯೆ ಸ್ಥಗಿತಗೊಂಡಿರುವ ಹಿನ್ನಲೆಯಲ್ಲಿ ಆಂಧ್ರಪ್ರದೇಶ ಹಾಗೂ ಕರ್ನಾಟಕ ರಾಜ್ಯಗಳಿಗೆ 2000-2001ನೇ ಸಾಲಿಗೆ ''ಬೆಳೆ ರಜೆ'' ಘೋಷಿಸುವಂತೆ ಅಭಿಪ್ರಾಯ ಪಟ್ಟಿರುತ್ತಾರೆ. ಕರ್ನಾಟಕದಿಂದ ಪ್ರತಿನಿಧಿಸಿದ್ದ ಸದಸ್ಯರು ಈ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸುತ್ತಾ, ಈಗಾಗಲೇ ತಂಬಾಕು ಬೆಳೆಯುವ ಪ್ರದೇಶಗಳಲ್ಲಿನ ರೈತರು ಬ್ಯಾಂಕುಗಳಿಂದ ಸಾಲವನ್ನು ಪಡೆದು ನರ್ಸರಿಗಳನ್ನು ಪಡೆದು ನರ್ಸರಿಗಳನ್ನು ಬೆಳೆಯುವ ಪ್ರಕ್ರಿಯೆ ಪ್ರಾರಂಭಿಸಿರುವುದರಿಂದ ಹಾಗೂ ಈ ಪ್ರದೇಶಗಳಲ್ಲಿ ಬೇರೆ ಯಾವ ಪರ್ಯಾಯ ಬೆಳೆಗಳನ್ನು ಲಾಭದಾಯಕವಾಗಿ ಬೆಳೆಯಲು ಲಭ್ಯವಿಲ್ಲದೆ ಇರುವ ಅಂಶವನ್ನು ಮಂಡಳಿಗೆ ತಿಳಿಸಿ, ಆದುದರಿಂದ ಅವರು ಕರ್ನಾಟಕ ಬಹುತೇಕ ವಿ.ಎಫ್. ಸಿ. ತಂಬಾಕು ಬೆಳೆಗಾರರೆಲ್ಲಾ ಸಣ್ಣ ಹಾಗೂ ಅತಿ ಸಣ್ಣ ರೈತರುಗಳಾಗಿದ್ದು ಇವರುಗಳು ಬೆಳೆಯುವ ತಂಬಾಕು ಹೊರ ದೇಶಗಳಿಗೆ ರಫ್ತು ಮಾಡಲಾಗುತ್ತಿದೆಯೆಂದು ತಿಳಿಸಿರುತ್ತಾರೆ. ಕರ್ನಾಟಕದಲ್ಲಿ ಈ ರೀತಿಯ ''ಬೆಳೆ ರಜೆ'' ಘೋಷಣೆಯಿಂದ ಸಣ್ಣ ಹಾಗೂ ಅತಿ ಸಣ್ಣ ರೈತರುಗಳ ಆಸಕ್ತಿ ಮೇಲೆ ಪರಿಣಾಮ ಬೀರುವುದ ಲ್ಲದೆ ಅಂತರ್ ರಾಷ್ಟ್ರೀಯ ಮಾರುಕಟ್ಟೆಯಲ್ಲಿ, ಅಂತರ್ ರಾಷ್ಟ್ರೀಯ ಗ್ರಾಹಕರುಗಳು, ತಮ್ಮ ಅವಶ್ಯಕತೆ ಗಳಿಗೆ ಇತರೆ ಮೂಲಗಳನ್ನು ಹುಡುಕಿ ಕೊಳ್ಳುವ ಸಾಧ್ಯತೆ ಇರುವುದರಿಂದ, ಭಾರತವು ಖಾಯಂ ಆಗಿ ಅಂತರ್ ರಾಷ್ಟ್ರೀಯ ಮಾರುಕಟ್ಟೆಯನ್ನು ಕಳೆದುಕೊಳ್ಳುವಂತಾಗುತ್ತದೆ. ನಮ್ಮ ಈ ಸ್ಥಿತಿಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದರೂ, ಮತ್ತೇ ದಿನಾಂಕ 31-3-2000ದೊಳಗೆ ಕರ್ನಾಟಕದ ಅಭಿಪ್ರಾಯವನ್ನು ತಿಳಿಸಿದರೆ, ಅದರ ಅಭಿಪ್ರಾಯವನ್ನು ದಿನಾಂಕ 3-4-2000ದಂದು ನಡೆಯುವ ತಂಬಾಕು ಮಂಡಳಿ ಸಭೆಯಲ್ಲಿ ಮಂಡಿಸುವುದಾಗಿ ಕೋರಿದ್ದರೆ ಹಿನ್ನಲೆಯಲ್ಲಿ, ರಾಜ್ಯ ಸರ್ಕಾರವು ಕರ್ನಾಟಕದಲ್ಲಿ ತಂಬಾಕು ಸಾಗುವಳಿಗೆ ''ಬೆಳೆ ರಜೆ'' ಘೋಷಿಸದಂತೆ ಕೇಂದ್ರ ವಾಣಿಜ್ಯ ಮಂತ್ರಿಯವರೆಗೆ ಬರೆದ ಪತ್ರದಲ್ಲಿ ಮತ್ತೆ ಪ್ರಬಲವಾಗಿ ಒತ್ತಾಯಿಸಲಾಗಿದೆ. ಅದರ ಪ್ರತಿಯನ್ನು ಅನುಬಂಧವಾಗಿ ಲಗತ್ತಿಸಲಾಗಿದೆ. ಅಲ್ಲದೆ, ಕರ್ನಾಟಕದಲ್ಲಿರುವ ತಂಬಾಕು ಬೆಳೆಗಾರರ ಹಾಗೂ ಕೃಷಿ ಕಾರ್ಮಿಕರ ಹಿತದೃಷ್ಟಿಯಿಂದ ಅಲ್ಲದೇ ದೇಶದ ಹಿತದೃಷ್ಟಿಯಿಂದ, ತಂಬಾಕು ಬೆಳೆಯುವ ಭಾಗದ (ಸಚಿವರುಗಳು : ಲೋಕಸಭಾ ಹಾಗೂ ವಿಧಾನಸಭಾ ಸದಸ್ಯರುಗಳ ನಿಯೋಗದ ಜೊತೆ ಕೇಂದ್ರವಾಣಿಜ್ಯ ಸಚಿವರನ್ನು ಭೇಟಿ ಮಾಡಿ ಆಂಧ್ರಪ್ರದೇಶದ ಒತ್ತಡಕ್ಕೆ ಮಣಿಯದೆ, ಕರ್ನಾಟಕದಲ್ಲಿ ತಂಬಾಕುಬೆಳೆ ''ಬೆಳೆ ರಜೆ'' ಎಂದು ಘೋಷಿಸಬಾರದೆಂದು ಒತ್ತಾಯಿಸಲು ಪ್ರಸ್ತಾಪಿಸಿರುತ್ತೇನೆ.